
# ಇಂದಿನ ಅತ್ಯುತ್ತಮ ಬರವಣಿಗೆಯಲ್ಲಿ ನವ್ಯ ಸಾಹಿತ್ಯದ ಕೊಡುಗೆಯೂ ಇದೆ



**ಶೂದ್ರ ಶ್ರೀನಿವಾಸ್**

ಕಲೆ: ಜಬೀವುಲ್ಲಾ ಎಂ. ಅಸದ್

ಬರಗೂರು ರಾಮಚಂದ್ರಪ್ಪ ಅವರು ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿ ಸಂದರ್ಭದ ಗಂಭೀರ ಚಿಂತಕರು ಮತ್ತು ಲೇಖಕರು. ಅವರ 'ಶ್ರೇಷ್ಠತೆಯ ವ್ಯಸನ: ವಿಕಾಸವೋ? ಸೊಕ್ಕೋ?' (ಜೂನ್ ಸಂಚಿಕೆ) ಶೀರ್ಷಿಕೆಯ ಲೇಖನದ ಬಗ್ಗೆ ನನ್ನ ಪ್ರತಿಕ್ರಿಯೆ.



ಶ್ರೇಷ್ಠತೆಯ ಆಶಯದ ಕುರಿತ ಚರ್ಚೆ ನಿನ್ನೆಮೊನ್ನೆಯದಲ್ಲ. ಇದು ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ 'ಜಾಗೃತ ಸಮಾವೇಶ' ನಡೆದಾಗ ಅದಕ್ಕೆ ಇದನ್ನು ಧ್ಯೇಯವಾಕ್ಯವಾಗಿ ತೆಗೆದುಕೊಂಡದ್ದು. ಹೀಗೆ ತೆಗೆದುಕೊಳ್ಳಬೇಕಾದರೆ ನಮ್ಮ ಸಾಹಿತ್ಯ ಸಂದರ್ಭದ ಬಹು ಮುಖ್ಯ ಲೇಖಕರು ಮತ್ತು ಚಿಂತಕರಾದ ಯು.ಆರ್. ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಬಿ.ಸಿ. ರಾಮಚಂದ್ರ ಶರ್ಮ, ಪಿ. ಲಂಕೇಶ್, ಕಿ.ರಂ. ನಾಗರಾಜ ಮತ್ತು ಡಿ.ಆರ್. ನಾಗರಾಜ ಅವರು ಕೂತು ಸಾಕಷ್ಟು ಚರ್ಚೆ ಮಾಡಿ ಇದನ್ನು ತೆಗೆದುಕೊಂಡಿದ್ದು. ನಂತರ ಇದರ ಬಗ್ಗೆ ದೂರವಾಣಿಯಲ್ಲಿ ಗೋಪಾಲಕೃಷ್ಣ ಅಡಿಗರಿಗೆ ತಿಳಿಸಿ ಒಪ್ಪಿಗೆ ಪಡೆದದ್ದು. ಮುಂದೆ 'ಜಾಗೃತ ಸಮಾವೇಶ'ವು ಬಹುದೊಡ್ಡ ಪ್ರಮಾಣದಲ್ಲಿ, ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಪರ್ಯಾಯವಾಗಿ ನಡೆದದ್ದು. ಈ ಸಮ್ಮೇಳನದ ಅಧ್ಯಕ್ಷರು ಕೆ.ಎಸ್. ನರಸಿಂಹ ಸ್ವಾಮಿಯವರು. ಈ ಸಮಯದಲ್ಲಿ ಒಂದು ಗೋಷ್ಠಿಯ ಸಂದರ್ಭದಲ್ಲಿ ಕೆ.ವಿ. ಸುಬ್ಬಣ್ಣನವರು 'ನಮಗೆ ಶ್ರೇಷ್ಠತೆ ಎಂಬುದು ವ್ಯಸನವಾಗಬಾರದು' ಎಂದು ಚರ್ಚೆಗೆ ತೆಗೆದುಕೊಂಡರು. ಆಗ ಅಡಿಗರಿಂದ ಮೊದಲ್ಗೊಂಡು ಎಲ್ಲರೂ ಶ್ರೇಷ್ಠತೆಯ ಆಶಯ ಕುರಿತು ವಿವರಿಸಿದಾಗ ಅದನ್ನು ಸುಬ್ಬಣ್ಣನವರು ಮುಂದೆ ಬೆಳೆಸಲಿಲ್ಲ. ಆಗ ಚರ್ಚೆಯ ಸಂದರ್ಭದಲ್ಲಿ ಹಿರಿಯ ವಿದ್ವಾಂಸರಾದ ಮುದೇನೂರು ಸಂಗಣ್ಣನವರು ಶ್ರೇಷ್ಠತೆಯ ಬಗ್ಗೆ ಒತ್ತು ಕೊಟ್ಟು ಮಾತನಾಡಿದ್ದರು.